ವಿಷಯ ನೀವೇ ಮಾತಾಡಬಹುದು' ಎಂದ.

ಇಂಥದ್ದೆಲ್ಲಾ ನಮಗೆ ಹೊಸದಲ್ಲ. ಎಲ್ಲೇ ಹೋದರು ಪಟಗಾರರಿಗೆ ಕಾಡಿನ ನಡಿಗೆಯಲ್ಲಿ ಸಹಕರಿಸುವ ಕೂಲಿ ಜನ ಇದ್ದೇ ಇರುತ್ತಾರೆ. ಇವರ ಕೂಲಿ, ಇವರ ಹೆಸರನ್ನು ಶಿಫಾರಸ್ಸು ಮಾಡುವವನ ಕಮೀಷನ್, ಕೊನೆಗೆ ಭಕ್ಷೀಸು, ಹೀಗೆ ಮತ್ತೊಂದು ಮಗದೊಂದು ಎಲ್ಲವೂ ಮೊದಲೇ ನಿರ್ಣಯವಾಗಿರುತ್ತವೆ. ಹೀಗಾಗಿ ಯಾವುದೇ ಹೊಸ ಚೌಕಾಸಿ ವ್ಯವಹಾರ ಶುರು ಮಾಡುವುದು ವ್ಯರ್ಥ. ಸುಮ್ಮನೆ ಕೂತಿದ್ದ ಸಂಗೀತಾಳ ಗಂಡ ಫಕ್ಕನೆ ಬಾಯಿ ಹಾಕಿದಾಗಲೇ ನಮಗೆ ಚಿತ್ರಕಥೆ ಗೊತ್ತಾಗಿ ಹೋಯಿತು. ಹೀಗಾಗಿ 'ನೀವೇ ಕರೆಸಿಬಿಡಿ. ಬೆಳಗ್ಗೆ ಬರಲು ಹೇಳಿ. ಅದೇನು ಅವರ ಕೂಲಿ ಇದೆಯೋ ಅದನ್ನು ಕೊಡುತ್ತೇವೆ' ಎಂದು ತಿರುಗಿ ಮಾತಾಡದೆ ಒಪ್ಪಿಕೊಂಡೆವು. ಬೆಳಗ್ಗೆ ಆರು ಗಂಟೆಗೆ ಹೊರಡುವುದೆಂದು ಅಲ್ಲಿ ಹಸಿವಾದರೆ ತಿನ್ನಲು ಒಂದಿಷ್ಟು ಬಿಸ್ಕೆಟ್ ಇಟ್ಟುಕೊಳ್ಳುವುದು ಸೂಕ್ತವೆಂದು ರಂಟೂ ಸಹ ಸಲಹೆ ಕೊಟ್ಟ.

ಮೂವರು ಹುಡುಗರು ಲಗೇಜ್ ಹೊರಲು ಸಿದ್ಧವಾಗಿ ಬಂದಿದ್ದರು. ನಮ್ಮ ಬ್ಯಾಗು ಹಾಗೂ ಟ್ರೈಪಾಡ್‌ಗಳನ್ನು ಹಗ್ಗದಲ್ಲಿ ಸುತ್ತಿ ಬೆನ್ನಮೇಲೆ ಇಟ್ಟುಕೊಂಡರು. ಮುಂದೆ ಹುಡುಗರು ನಡೆಯುವುದೆಂದು ಅವರನ್ನು ಅನುಸರಿಸಿ ನಾವು ಹೋಗುವುದೆಂದು ನೀತಿ ರೂಪಿಸಿಕೊಂಡೆವು. ನಮ್ಮ ನಡುವೆ ನ್ಯಾಚುರಲಿಸ್ಟ್ ರಂಟೂ ಬರುವುದೆಂದು ನಿಗದಿಯಾಯಿತು. 'ಬೆಟ್ಟ ಇಳಿಯುವುದು ಸುಲಭ. ಹತ್ತುವಾಗಲೇ ಕರುಳು ಬಾಯಿಗೆ ಬರುವುದು. ಈಗಲೇ ಜಾಸ್ತಿ ಎನರ್ಜಿಟಿಕ್, ಓವರ್ ಆಕ್ಟೀವ್ ಆಗುವುದು ಬೇಡ. ಹಿಂತಿರುಗಿ ಬರಲು ಬೇಕಾದ ದಮ್ಮೂ ಒಂಚೂರು ಉಳಿಸಿಕೊಳ್ಳೋಣ' ಎಂದು ಡಾ. ರಾಘವೇಂದ್ರ ನಗುತ್ತಾ ಸಲಹೆ ಬಿತ್ತಿದರು.

ನಾವು ಹೊರಟ ಈ ಜಾಗ ದೊಡ್ಡ ಕಾಡಿನ ಪ್ರದೇಶವಾಗಿತ್ತು. ರಸ್ತೆಯಲ್ಲಿ ತುಂಬಾ ಏರುಪೇರುಗಳಿದ್ದವು. ಟ್ರೆಕ್ಕಿಂಗ್ ಹೋಗುವ ಥರದ ರಸ್ತೆ. ಜೊತೆಗೆ ಇಳಿಜಾರು ಬೇರೆ. ಮುಂದಿನ ಕಾಲು ಇಡುವ ಮೊದಲು ಸರಿಯಾದ ಜಾಗ ನೋಡಿಕೊಂಡು ಕಾಲಿಡಬೇಕಿತ್ತು. ಕೊಂಚ ಹೆಚ್ಚು ಕಮ್ಮಿಯಾಗಿ ಮುಗ್ಗರಿಸಿ ಬಿದ್ದರೆ ಮುಖ ಮುಸುಡಿ ಎಲ್ಲಾ ಕಿತ್ತು ಹೋಗುವ ಸಂಭವಗಳಿದ್ದವು. 'ಸಾವಕಾಶವಾಗಿ ಹೋಗೋಣ. ಕಾಡನ್ನು ಆಸ್ವಾದಿಸಿ ನಡಿಗೆ ಮಾಡಿ' ಎಂದು ನ್ಯಾಚುರಲಿಸ್ಟ್ ರಂಟೂ ಉಪದೇಶ ಬಿತ್ತರಿಸುತ್ತಿದ್ದ. ಇದು ಅತ್ಯುತ್ತಮ ಸಲಹೆ ಕೂಡ ಹೌದು. ಪಟ ಪಯಣದಲ್ಲಿ ಬರೀ ಚಿತ್ರ ತೆಗೆಯುವುದು ಮುಖ್ಯವಲ್ಲ. ನಮ್ಮ ನಡಿಗೆಯಲ್ಲಿ ಗಿಡಮರಗಳ ಸೊಬಗು, ಸಣ್ಣಪುಟ್ಟ ಕೀಟ, ಪತಂಗಗಳ ಚಲನೆ, ಹಕ್ಕಿಗಳ ಕೂಗು, ಹೂವಿನ ಸೊಬಗು... ಎಲ್ಲವನ್ನೂ ಗ್ರಹಿಸಬೇಕು.



ಅಂತೂ ಪರ್ವತವನ್ನು ಇಳಿದು ಒಂದು ಕಣಿವೆಯಂತಹ ಪ್ರದೇಶಕ್ಕೆ ಬಂದೆವು. ಅಲ್ಲಿ ನಮ್ಮ ನೆಚ್ಚಿನ ರೂಫಸ್ ಹಾರ್ನ್ ಬಿಲ್ ಪಕ್ಷಿ ಒಂದು ಮರದ ಪೊಟರೆಯಲ್ಲಿ ಗೂಡು ಕಟ್ಟಿತ್ತು. 'ತನ್ನ ಪತ್ನಿಗೆ ತಿನಿಸನ್ನು ತರಲು ಹೋದ ಗಂಡುಹಕ್ಕಿ ಹೆಚ್ಚೆಂದರೆ ಒಂದೆರಡು ಸಲ ಮಾತ್ರ ಬರುತ್ತದೆ. ಅಷ್ಟರಲ್ಲೇ ನಿಮ್ಮ ಚಿತ್ರ ತೆಗೆಯುವ ಕೆಲಸ ಮುಗಿಸಿಕೊಳ್ಳಬೇಕೆಂದು' ರಂಟೂ ಹೇಳಿದ. ಕೂರಲು ಸೂಕ್ತ ಜಾಗಗಳನ್ನು ನೀವೇ ಹುಡುಕಿಕೊಳ್ಳಿ ಎಂದು ಸೂಚಿಸಿದ. ತೀರ ಇಳಿಜಾರಿನ ಆ ಕಣಿವೆಯಲ್ಲಿ ನೆಟ್ಟಗೆ ಕೂತುಕೊಳ್ಳುವುದು ಒತ್ತಟ್ಟಿಗಿರಲಿ ನಿಲ್ಲುವುದು ಕೂಡ ಸಾಧ್ಯವಿರಲಿಲ್ಲ. ಆದರೂ ಭಂಡಬಾಳಿನ ನಾನು ಮತ್ತು ಡಾ. ರಾಘವೇಂದ್ರ ತೆವಳಿ, ನುಲಿದು, ಕೊಸರಾಡಿ